ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರಃ 507/2023
ಪ್ರಾ ಸಾಃ 01

| | | |
|---|---|---|
| ಸಾಕ್ಷಿದಾರರ ಹೆಸರು | : | ಕೆ.ಎನ್ ಸುರೇಂದ್ರ |
| ತಂದೆಯ ಹೆಸರು | : | ನರಸಿಂಹ |
| ಪ್ರಾಯ | : | 50 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ | : | ಕುಂದಾಪುರದ ಕಸಬ |

ದಿನಾಂಕಃ **19-07-2025** ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು**.**

ಕಲಂ 299 ಸಿಆರ್.ಪಿ.ಸಿ ರಡಿಯಲ್ಲಿ ಮುಖ್ಯ ವಿಚಾರಣೆಃ ಶ್ರೀ ಬಿ.ಆರ್. ಎನ್. ವಕೀಲರಿಂದ

ಆರೋಪಿತ ಗುರುಚರಣ್. ವ್ಯವಹಾರಿಕ ಸಂಬಂಧ 8 ಲಕ್ಷ ರೂಪಾಯಿಗಳನ್ನು ನಗದು ಮುಖಾಂತರ ಕೊಟ್ಟಿರುತ್ತೇನೆ. ಅವರು ಹಣವನ್ನು ಸರಿಯಾದ ಸಮಯಕ್ಕೆ ಕೊಡದೆ ಚೆಕ್ ಕೊಟ್ಟಿರುತ್ತಾರೆ. ದಿನಾಂಕ 07-02-2013 ರಂದು ಚೆಕ್ ನ್ನು ಕೊಟ್ಟಿರುತ್ತಾರೆ. ಅವರು ಕಾರ್ಪೊರೇಶನ್ ಬ್ಯಾಂಕ್ ಚೆಕ್ ನ್ನು ಕೊಟ್ಟಿದ್ದು ನಾನು ಎಮ್ ಸಿ ಸಿ ಬ್ಯಾಂಕಿಗೆ ಚೆಕ್ ನ್ನು ನಗದೀಕರಣಕ್ಕೆ ಹಾಕಿದಾಗ ಸದರಿ ಚೆಕ್ ಅಮಾನಿಕರಣವಾಗಿ ಬಂದಿರುತ್ತದೆ. ನಾನು ವಕೀಲರ ಮುಖಾಂತರ ನೋಟಿಸು ಕೊಟ್ಟಿರುತ್ತೇನೆ. ನೋಟಿಸನ್ನು ಅವರು ಸ್ವೀಕರಿಸಿರುವುದಿಲ್ಲ. ತದನಂತರ ನನ್ನ ವಕೀಲರ ಮುಖಾಂತರ ಸದರ ಪ್ರಕರಣ ಸಲ್ಲಿಸಿರುತ್ತೇನೆ ಹಾಗೂ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸುತ್ತಿರುತ್ತೇನೆ.

| ಕ್ರಮ ಸಂಖ್ಯೆ | ದಾಖಲಾತಿಗಳ ವಿವರ | ನಿಶಾನೆ |
|---|---|---|
| 1 | ದಿನಾಂಕ 07-02-2013 ರ ಚೆಕ್ ನಂಬ್ರ 023841 ರ ಚೆಕ್, | ನಿಪಿ-3 |
| 2 | ಆರೋಪಿಯ ಸಹಿ, | ನಿಪಿ 3(ಎ) |
| 3 | ದಿನಾಂಕ 05-03-2013 ರ ಬ್ಯಾಂಕ್ ನ ಹಿಂಬರಹ | ನಿಪಿ-4 |
| 4 | ದಿನಾಂಕ 26-03-2013 ರ ಕಚೇರಿಯ ನೋಟಿಸಿನ ಪ್ರತಿ | ನಿಪಿ-5 |

| | | |
|---|---|---|
| 5 | ಹಿಂದಿರುಗಿದ ಅಂಚೆ ಲಕೋಟೆ | ನಿಪಿ-6 |
| 6 | ಹಿಂದಿರುಗಿದ ಅಂಚೆ ಲಕೋಟೆಯಲ್ಲಿನ ನೋಟಿಸಿನ ಪ್ರತಿ | ನಿಪಿ-6(ಎ) |
| 7 | ದೂರು | ನಿಪಿ-7 |
| 8 | ದೂರಿನಲ್ಲಿರುವ ನನ್ನ ಸಹಿ | ನಿಪಿ-7(ಎ) |

ಆದ್ದರಿಂದ ಕಾನೂನಿನನ್ವಯ ಆರೋಪಿಯ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಪ್ರಾಥನೆ. ಆರೋಪಿ ತಲೆಮರೆಸಿಕೊಂಡಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ